**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.202/2021

**PW**. 3

**CW**. 4

**ಸಾಕ್ಷಿಯ ಹೆಸರು –ಧನಪಾಲೇಗೌಡ**

**ತಂದೆಯ ಹೆಸರು –ಮರಿಗೌಡ**

**ವಯಸ್ಸು –59 ವರ್ಷಗಳು**

ದಿನಾಂಕ 07–11–2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಸಣ್ಣೇಗೌಡರ ಕಾಲೋನಿ , ಹುಣಸೂರು ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1 , 2 ಮತ್ತು ಆರೋಪಿತರು ಗೊತ್ತು. ಈಗ್ಗೆ ನಾಲ್ಕುವರೆ ವರ್ಷಗಳ ಹಿಂದೆ ಒಂದು ನಾನು ಬೆಳಗ್ಗ 6.30 - 7.00 ಗಂಟೆ ಸುಮಾರಿಗೆ ನಾನು ನಮ್ಮ ಜಮೀನಿನಲ್ಲಿ ಕೆಲಸ ಮಾಡಲು ಆಳುಗಳನ್ನು ಕರೆಯಲು ಆರೋಪಿತರ ಮನೆ ಮುಂದೆ ಹೋಗುತ್ತಿದ್ದೇ. ಆಗ ಚಾಸಾ–2 ಗದ್ದೆ ಕಡೆ ಹೋಗುತ್ತಿದ್ದ. ಆ ಸಮಯಕ್ಕೆ 1 ನೇ ಆರೋಪಿಯ ಮನೆಯ ಮುಂಭಾಗ ಎಲ್ಲ ಆರೋಪಿತರು ಚಾಸಾ–2 ರವರ ಮೇಲೆ ಗಲಾಟೆ ಮಾಡಿ , 2 ರಿಂದ 5 ನೇ ಆರೋಪಿತರು ಅಕ್ರಮವಾಗಿ ಗುಂಪುಕಟ್ಟಿಕೊಂಡು ಚಾಸಾ–2 ರವರನ್ನು ತಬ್ಬಿ ಹಿಡಿದುಕೊಂಡಿದ್ದರು. 1 ನೇ ಆರೋಪಿಯು ಮಚ್ಚಿನಿಂದ ಚಾಸಾ–2 ರವರು ತಲೆಗೆ , ಎಡಭಾಗದ ಸೊಂಟಕ್ಕೆ ಮಚ್ಚಿನಿದ ಹಲ್ಲೆ ಮಾಡಿ, ರಕ್ತ ಗಾಯ ಮಾಡಿದ. ಅದೇ ಸಮಯಕ್ಕೆ ಚಾಸಾ–1 ಮತ್ತು 3 ರವರು 1 ನೇ ಆರೋಪಿಯ ಮನೆಯ ಮುಂದೆ ನಿಂತಿದ್ದರು. ಆಗ ನಾನು , ಚಾಸಾ–1 ಮತ್ತು 3 ರವರು ಸೇರಿ ಜಗಳ ಬಿಡಿಸಿ, ಗಾಯಗೊಂಡಿದ್ದ ಚಾಸಾ–2 ರವರನ್ನು ಆಸ್ಪತ್ರೆಗೆ ಸೇರಿಸರುತ್ತೇವೆ. ಸದರಿ ಮಚ್ಚುನ್ನು ಈಗ

ನೋಡುತ್ತಿದ್ದು , ಅದನ್ನು ಈಗಾಗಲೇ ಮುಮಾ-1 ಎಂದು ಗುರುತಿಸಲಾಗಿದೆ. ನಂತರ ಆ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ-**

ಚಾಸಾ-3 ನನ್ನ ಮಗಳು , ಚಾಸಾ-1 ನನ್ನ ಅಳಿಯ ಎಂದರೆ ಸರಿ . ಕೃತ್ಯ ನಡೆದ ಸ್ಥಳದಿಂದ 3 ರಸ್ತೆಗಳ ನಂತರ ನಮ್ಮ ಮನೆಯಿದೆ ಎಂದರೆ ಸರಿ .ಕೃತ್ಯ ನಡೆದ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಎಲ್ಲ ಆರೋಪಿತರು ಕೃತ್ಯ ನಡೆದ ಸ್ಥಳದಲ್ಲಿ ನಿಂತಿದ್ದರು. 3 ನೇ ಆರೋಪಿಯು ಚಾಸಾ-2 ರವರ ಎದೆಯ ಭಾಗಕ್ಕೆ ಹಿಡಿದುಕೊಂಡಿದ್ದ. 2 ಮತ್ತು 4 ನೇ ಆರೋಪಿತರು ಚಾಸಾ-2 ರವರ ಕೈಗಳನ್ನು ಹಿಡಿದುಕೊಂಡಿದ್ದರು. ಕೃತ್ಯ ನೆಡದ ಸ್ಥಳದಲ್ಲ ಆರೋಪಿತರು ಧರಿಸಿದ್ದ ಬಟ್ಟೆಗಳ ಬಣ್ಣಗಳು ನನಗೆ ಹೇಳಲು ಬರುವುದಿಲ್ಲ.1 ನೇ ಆರೋಪಿಯು ತನ್ನ ಮನೆಯ ನಾಯಿ ಸಾಕಿಲ್ಲ. ಚಾಸಾ-2 ನಾಯಿ ಸಾಕಿದ್ದಾರೆ. ಚಾಸಾ-2 ರವರು ನಾಯಿಯನ್ನು ಕಟ್ಟಿ ಹಾಕುವುದಿಲ್ಲ. 2 ರಿಂದ 5 ನೇ ಆರೋಪಿತರು ಚಾಸಾ-2 ರವರನ್ನು ಹಿಂದಿನಿಂದ ಬಂದು ತಬ್ಬಿಕೊಂಡಿದ್ದರು. 2 ಮತ್ತು 3 ನೇ ಆರೋಪಿತರು ಕಾಲೇಜು ವಿದ್ಯಾರ್ಥಿಗಳು ಎಂದರೆ ಸರಿ . 4 ನೇ ಆರೋಪಿ ಫೈನಾನ್ಸ ಹಣಕಾಸು ಸಂಸ್ಥೆಯಲ್ಲಿ ಕೆಲಸ ಮಾಡುತ್ತಾನೆ ಎಂದರೆ ಸರಿಯಲ್ಲ. ಆರೋಪಿತರು ಕೃತ್ಯ ನಡೆದ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸಮಯದಲ್ಲಿ ಸ್ಥಳದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಚರಂಡಿ ಕೆಲಸ ಮಾಡಿ ಮುಗಿಸಿದ್ದರು. ಕೃತ್ಯ ನಡೆದ ಸ್ಥಳದಲ್ಲಿ ಚೂಪಾದ ಕಲ್ಲುಗಳು ಇದ್ದವು ಎಂದರೆ ಸರಿಯಲ್ಲ. 2 ರಿಂದ 5 ನೇ ಆರೋಪಿತರು ಚಾಸಾ-2 ರವರನ್ನು ತಬ್ಬಿ ಹಿಡಿದುಕೊಂಡಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ಕಲ್ಲುಗಳ ಮೇಲೆ ಬಿದ್ದು ಪೆಟ್ಟು ಮಾಡಿಕೊಂಡ ಸಂದರ್ಭ ಉಪಯೋಗಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ರ ಮಚ್ಚನ್ನು ಈ ದಿನ

ಮೊದಲನೆ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಮು ಮಾ1 ರ ಮಚ್ಚಿನಿಂದ ಚಾಸಾ–2 ರವರಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ–2 ರವರನ್ನು ಬಾಡಿಗೆ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಸದರಿ ಕಾರಿಗೆ ಚಾಲಕ ಯಾರು ಎಂದು ನನಗೆ ಗೊತ್ತಿಲ್ಲ. ಕಾರ್ ನಂಬರ್ ಗೊತ್ತಿಲ್ಲ. ಚಾಸಾ–2 ರವರನ್ನು 7 ಗಂಟೆಗೆ ಆಸ್ಪತ್ರೆಗೆ ದಾಖಲು ಮಾಡಿದ್ದೇವೆ. ನಮ್ಮುರಿನಿಂದ ಹುಣಸೂರು ಆಸ್ಪತ್ರೆಗೆ 7–8 ಕಿಮೀ ದೂರವಿದೆ. ಚಾಸಾ–2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಬೇರೆ ಯಾರು ಯಾರು ಇದ್ದರು ನನಗೆ ಗೊತ್ತಿಲ್ಲ. ಆರೋಪಿತರಿಗೂ ನನಗೂ ವಿಶ್ವಾಸ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರಿಂದ 3 ರವರು ನನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.